ಡಾ. ವೈ. ನಾಗಪ್ಪ : ಮಾನ್ಯ ಉಪಾಧ್ಯಕ್ಷರೇ, ಖಂಡಿತಾ ನಮ್ಮ ಸರ್ಕಾರ ಸುಭದ್ರವಾಗಿದೆ. ಅದಕ್ಕೆ ಬದ್ದವಾಗಿದೆ. ನಾವು ಅದರ ಬಗ್ಗೆ ಗಮನ ಹರಿಸಿ ಆದಷ್ಟು ಬೇಗ ಕ್ರಿಮಿನಲ್ ಪ್ರೊಸೀಜರ್ ನಾವು ಅಪ್ಲೈ ಮಾಡಿ ಇವತ್ತು ಅವರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಬಾಗಲಕೋಟೆ ಜಿಲ್ಲೆಯಲ್ಲಿ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಅಳವಡಿಸುವುದು

517 (5915) : **ಶ್ರೀ ಗೋವಿಂದ ಎಂ. ಕಾರಜೋಳ** : ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆ ಮುಧೋಳ ಮತ ಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆಸಿದ ಬಾವಿಗಳಿಗೆ ಸುಮಾರು 3 ತಿಂಗಳುಗಳಿಂದ ಪಂಪ್ ಸೆಟ್‌ಗಳನ್ನು ಅಳವಡಿಸದೆ ಇರಲು ಕಾರಣವೇನು;

ಆ) ಹಾಗಿದ್ದಲ್ಲಿ; ಎಷ್ಟು ದಿನಗಳಲ್ಲಿ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗುವುದು?

ಡಾ. ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ದಿ ನಿಗಮದ ಮೂಲಕ ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಯಡಿಯಲ್ಲಿ ಕೊರೆದ ಪ್ರತಿ ಕೊಳವೆ ಬಾವಿಗೆ ಸಹಾಯಧನ ಗರಿಷ್ಠ ರೂ. 65,000/– ಗಳಾಗಿದ್ದು, ಹೆಚ್ಚುವರಿ ಸಾಲ ರೂ. 10,000/– ಗಳವರೆಗೆ NSCFDC/NSTFDC ರವರಿಂದ ಅವಧಿ ಸಾಲವನ್ನಾಗಿ ಪಡೆಯುತ್ತಿದ್ದು, ಸದರಿ ಮೊತ್ತಕ್ಕೆ ಫಲಾನುಭವಿಗಳು ಅಗತ್ಯ ದಾಖಲಾತಿಗಳನ್ನು ಪಂಪ್ ಅಳವಡಿಸುವ ಮೊದಲೇ ನೀಡಬೇಕಾಗಿರುತ್ತದೆ. ಒಂದು ವೇಳೆ (ಕೊಳವೆ ಬಾವಿ ವೆಚ್ಚ ಗರಿಷ್ಠ ರೂ. 75,000/– ಗಳು ಮೀರಿದ್ದಲ್ಲಿ ಹೆಚ್ಚುವರಿ ಹಣವನ್ನು ಫಲಾನುಭವಿಗಳೇ ನೇರವಾಗಿ ಭರಿಸಬೇಕಾಗುತ್ತದೆ.

ಫಲಾನುಭವಿಗಳು ಅವಧಿ ಸಾಲದ ಭದ್ರತೆಗೆ ಅಗತ್ಯ ದಾಖಲಾತಿಗಳನ್ನು ನೀಡದೇ ಇರುವ ಹಾಗೂ ಘಟಕದ ವೆಚ್ಚ ರೂ. 75,000/– ಗಳು ಮೀರಿದ ಪ್ರಕರಣಗಳಲ್ಲಿ ಹೆಚ್ಚುವರಿ ಹಣವನ್ನು ಫಲಾನುಭವಿಗಳು ನಿಗಮಕ್ಕೆ ಪಾವತಿಸದೆ ಇರುವ ಪ್ರಯುಕ್ತ ಪಂಪ್ ಅಳವಡಿಸುವ ಕಾರ್ಯ ವಿಳಂಬವಾಗಿದೆ.

ಕರ್ನಾಟಕ ಹಿಂದುಳಿದ ವರ್ಗಗಳ ಅಬಿವೃದ್ದಿ ನಿಗಮವು ಕೊರೆಸಿದ ಕೊಳವೆ ಬಾವಿಗಳಲ್ಲಿ ಒಂದು ಕೊಳವೆ ಬಾವಿಗೆ ಮಾತ್ರ ಪಂಪ್‌ಸೆಟ್ ಅಳವಡಿಸಿರುವುದಿಲ್ಲ.

ಆ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ದಿ ನಿಗಮ ನಿಯಮಿತ:

2005–06ನೇ ಸಾಲಿನ ಆಗಸ್ಟ್ ಮಾಹೆಯ ಅಂತ್ಯದೊಳಗೆ ಪಂಪ್‌ಸೆಟ್ ಅಳವಡಿಸುವ ಕ್ರಮ ಕೈಗೊಳ್ಳುತ್ತಿದೆ.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ದಿ ನಿಗಮ ನಿಯಮಿತ

ಪಂಪ್ ಸೆಟ್ ಸರಬರಾಜು ಮಾಡಲು ದಿನಾಂಕ 20–06–2005 ರಂದು ಆದೇಶ ನೀಡಿದೆ. ಶೀಘ್ರದಲ್ಲೇ ಈ ಪಂಪ್‌ಸೆಟ್‌ನ್ನು ಅಳವಡಿಸಲಾಗುವುದು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೇ, ಇವತ್ತು ನನ್ನ ಕ್ಷೇತ್ರದಲ್ಲಿ ಗಂಗಾಕಲ್ಯಾಣ ಯೋಜನೆಯಲ್ಲಿ ಕೊಳವೆಬಾವಿಗಳನ್ನು ತೋಡಿದ್ದಾರೆ. ಮೂರು–ನಾಲ್ಕು ತಿಂಗಳಾಗಿದೆ. ಇವತ್ತಿಗೂ ಪಂಪ್‌ಸೆಟ್ಟುಗಳನ್ನು ಹಾಕಲಿಲ್ಲ. ಅಲ್ಲಿ ಏನಾಗುತ್ತದೆಂದರೆ ಅಡವಿಯೊಳಗೆ ಯಾರೂ ನೋಡುವವರು ಇರುವುದಿಲ್ಲ. ಕೆಲವರು ದನ ಕಾಯುವ ಹುಡುಗರು ಮತ್ತೊಬ್ಬರು ಅದರಲ್ಲಿ ಕಲ್ಲನ್ನು ಹಾಕುವುದು ಮತ್ತು ಮಣ್ಣು ಹಾಕುವುದು ಈ ರೀತಿಯಾಗುತ್ತದೆ. ಆ ರೀತಿ ಹಾಕಿರುವ ಕೊಳವೆ ಬಾವಿ ಕೂಡ ಸರಿಯಾಗಿ ಉಪಯೋಗವಾಗುವುದಿಲ್ಲ. ಅದಕ್ಕಾಗಿ ನೀರು ಬಿದ್ದತಕ್ಷಣ ಸರ್ಕಾರ ಎಂಟು–ಹತ್ತು ದಿವಸದಲ್ಲಿ ಪಂಪುಗಳನ್ನ ಅಳವಡಿಸಬೇಕು, ಮತ್ತು ಎಲೆಕ್ಟ್ರಿಫಿಕೇಷನ್ ಕನೆಕ್ಷನ್‌ನ್ನು ಮಾಡಿಸಬೇಕು. ಅದಕ್ಕಾಗಿ ತಾವು ಆದ್ಯತೆಯನ್ನು ಕೊಟ್ಟು ಏನು ಮಾಡುತ್ತೀರಿ ಎಂಬುದನ್ನು ಹೇಳಿ. ಮತ್ತೆ ಎಷ್ಟು ದಿವಸದಲ್ಲಿ ಪಂಪಸೆಟ್ಟುಗಳನ್ನು ಸಪ್ಲೈ ಮಾಡುತ್ತೀರಿ?

ಶ್ರೀ ಎ. ಪಾಪರೆಡ್ಡಿ :– ಮಾನ್ಯ ಉಪಾಧ್ಯಕ್ಷರೇ, ಇದು ಒಂದು ಕ್ಷೇತ್ರದ್ದು ಅಲ್ಲ. ಎಲ್ಲಾ ಕ್ಷೇತ್ರದಲ್ಲೂ ಅದೇ ರೀತಿ ಇದೆ. ಎಲ್ಲಾ ಕಡೆಯಲ್ಲೂ 3–4 ತಿಂಗಳಿಂದ ಪಂಪುಸೆಟ್ಟುಗಳನ್ನು ಹಾಕಿಲ್ಲ. ಅದರ ಬಗ್ಗೆ ಉತ್ತರವನ್ನು ಹೇಳಬೇಕು.

ಶ್ರೀ ಎ. ಎಸ್. ಪಾಟೀಲ್: ಸರ್ಕಾರದವರು ಈ ಎಸ್‌ಸಿ ಯವರಿಗೆ ಏನು ಕೊಡುತ್ತಿದ್ದೀರಲ್ಲಾ, ಈಗ 75 ಸಾವಿರ ಮೀರಿದ್ದಲ್ಲಿ ಅವರು ತುಂಬಬೇಕೆಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಪಾಪ, ಅವರು 4 ಪರ್‌ಸೆಂಟ್‌ಗೆ ಬಡ್ಡಿ ಸಾಲವನ್ನು ತಂದು ಏನೋ ಮಾಡಿ ಸಾಲ ವಸೂಲಿ ಮಾಡಿದ ರೀತಿ ಮಾಡಿದಂತೆ ಇದೆ. ಬಜೆಟ್ ಕಡಿಮೆ ಇದ್ದರೆ ದಯವಿಟ್ಟು ತಾವು ನಾಲ್ಕು ಬೋರ್‌ಗಳನ್ನು ಕಡಿಮೆ ಕೊರೆಯಿರಿ. ಸಂಪೂರ್ಣವಾಗಿ ಅದನ್ನು ಪೂರ್ಣಗೊಳಿಸುವ ವ್ಯವಸ್ಥೆಯನ್ನು ಮಾಡುತ್ತೀರೋ ಹೇಗೆ ಎಂಬುದನ್ನು ಹೇಳಬೇಕು. ಸಂಪೂರ್ಣವಾಗಿ ಅದನ್ನು ಸರ್ಕಾರವೇ ಪೂರ್ಣ ಮುಗಿಸಿಕೊಡಬೇಕು. ಆ ರಿತಿಯಾಗಿ ವ್ಯವಸ್ಥೆ ಮಾಡಬೇಕು. ಅವರ ಕಡೆಯಿಂದ ಏನೂ ಆಗಬಾರದು. ಈವನ್ ಕರೆಂಟ್ ಬಿಲ್ಲೂ ಸಹಿತ ಕರೆಂಟ್ ಡಿಪಾಸಿಟ್ಟನ್ನು ಸಹಿತ ಅವರೇ ಸರ್ಕಾರದವರು ತುಂಬಬೇಕು. ಅದನ್ನೂ ಅವರಿಗೇ ತುಂಬಿ ಎಂದು ಹೇಳುತ್ತರೆ. ಪರಿಸ್ಥಿತಿ ಅದೇ ರೀತಿ ಇದೆ. ದಯವಿಟ್ಟು ಅದನ್ನು ಮಾಡಿ.

ಶ್ರಿ ಅಲ್ಕೋಡ್ ಹನುಮಂತಪ್ಪ :– ಬಹಳಷ್ಟು ಬೋರ್‌ವೆಲ್‌ಗಳನ್ನು ನಾವು ಕೊರೆದಿದ್ದೇವೆ. ಕೊಳವೆ ಬಾವಿಗಳನ್ನು ತೆಗೆದಿದ್ದೇವೆ. ತೆಗೆದವರು ಹತ್ತು–ಹನ್ನೆರಡು ಸಾವಿರ ರೂ.ಗಳನ್ನು ತುಂಬಬೇಕೆಂದು ಬಂದಾಗ ಇವತ್ತಿಗೂ ಅವರಿಗೆ ವಿದ್ಯುತ್ ಸಪ್ಲೈಯಾಗಿಲ್ಲ. ಹಾಗೆಯೇ ಅವುಗಳು ಉಳಿದುಕೊಂಡಿವೆ. ಹಾಗಾಗಿ ಸರ್ಕಾರ ಏನು ಆ ಜನರಿಗೆ ಹಣವನ್ನು ಖರ್ಚು ಮಾಡುತ್ತೀರಿ, ಅದು ಸಫಲವಾಗುತ್ತಿಲ್ಲ ಎನ್ನುವ ಕಾರಣಕ್ಕಾಗಿ ಬರುವ ಎಲ್ಲಾ ಖರ್ಚನ್ನು ಕೂಡ ನಿಗಮದಿಂದ ಭರಿಸಿದರೆ ಮಾತ್ರ ನಾವು ಮಾಡುವ ಕಾರ್ಯಕ್ರಮಗಳು ಸಫಲವಾಗುತ್ತವೆ. ಇಲ್ಲದಿದ್ದರೆ ಆಗುವುದಿಲ್ಲ ಎನ್ನುವುದನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಾರಿಕಾರ್ ಭೀಮಪ್ಪ ಚನ್ನಪ್ಪ :– ಮಾನ್ಯ ಉಪಾಧ್ಯಕ್ಷರೇ, ಈಗ ಎಸ್‌ಸಿ ಎಸ್‌ಟಿಯವರಿಗೆ 65 ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತಾರೆ. ಆ ಸಬ್ಸಿಡಿಯಲ್ಲಿ ಕೆಲಸವಾದ ನಂತರ ಆ ಅಧಿಕಾರಿ ಏನು ಹೇಳುತ್ತಾರೆಂದರೆ ನೀವೆಲ್ಲಾ ಪೈಪ್‌ಲೈನ್‌ಗಳನ್ನು ತೆಗೆದುಕೊಂಡು ಬನ್ನಿ, ಮೋಟಾರ್ ತೆಗೆದುಕೊಂಡು ಬನ್ನಿ ಕೊಡುತ್ತೇವೆನ್ನುತ್ತಾರೆ. ಎಸ್‌ಸಿ ಎಸ್‌ಟಿ ಯವರಿಗೆ ಇದನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಒಂದು ತಾಲ್ಲೂಕಿನಲ್ಲಿ ಎಸ್‌ಸಿ ಎಸ್‌ಟಿ ಯವರ ಸಲುವಾಗಿ 20–21 ಕೊಳವೆಬಾವಿಗಳನ್ನು ಸ್ಯಾಂಕ್ಷನ್ ಮಾಡಿ ಕಳುಹಿಸಿ ಕೊಡುತ್ತಾರೆ. ಆ ಸ್ಯಾಂಕ್ಷನ್‌ನಲ್ಲಿ

ಯಾವುದೇ ರೀತಿಯಿಂದ ನಮ್ಮ ಒಂದು ತಾಲ್ಲೂಕಿಗೆ 40–50 ಗ್ರಾಮಗಳು ಬರುತ್ತವೆ. ಆ ಗ್ರಾಮಕ್ಕೆ 20 ಎಂದರೆ 20 ಜನರಿಗೆ ಕೊಟ್ಟರೆ ಉಳಿದ 20 ಹಳ್ಳಿಗಳಿಗೆ ಏನು ಕೊಡಬೇಕು ಎಂದು ತಾವು ವಿಚಾರ ಮಾಡಿ ಸ್ವಲ್ಪ ಹೆಚ್ಚಾಗಿ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ :– ಮಾನ್ಯ ಉಪಾಧ್ಯಕ್ಷರೇ, ಯೂನಿಟ್ ಕಾಸ್ಟ್ 65 ಸಾವಿರ ಎಂದು ತಾವು ಫಿಕ್ಸ್ ಮಾಡಿದ್ದೀರಿ. ಯೂನಿಟ್ ಕಾಸ್ಟನ್ನು ಫಿಕ್ಸ್ ಮಾಡಿ ಸುಮಾರು ಏಳೆಂಟು ವರ್ಷವಾಯಿತು. ನನ್ನ ತಿಳಿವಳಿಕೆ ಪ್ರಕಾರ 97 ಇರಬಹುದು. 97 ರಲ್ಲಿ ಯೂನಿಟ್ ಕಾಸ್ಟನ್ನು ಫಿಕ್ಸ್ ಮಾಡಿದ್ದೀರಿ. 97 ರಿಂದ ಇವತ್ತಿನವರೆಗೂ ಮಾರುಕಟ್ಟೆಯಲ್ಲಿ ಬೆಲೆ ಪಂಪು ಸೆಟ್ಟಿನದು ಆಗಿರಬಹುದು, ಡೀಸಲ್ ಆಗಿರಬಹುದು, ಕೊಳವೆ ಬಾವಿ ಕೊರೆಯುವ ರಿಗ್ ಆಗಿರಬಹುದು, ಪ್ರತಿನಿತ್ಯ ಬೆಲೆ ಹೆಚ್ಚಾಗುತ್ತದೆ. ಪ್ರತಿವರ್ಷ ಕನಿಷ್ಟಪಕ್ಷ ಹತ್ತು ಪರ್‌ಸೆಂಟಾದರು ಹೆಚ್ಚಾಗುತ್ತದೆ. ಅದಕ್ಕೆ ನಾನೇನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆಂದರೆ 65 ಯೂನಿಟ್‌ಗೆ ಎಷ್ಟು ಖರ್ಚು ಬರುತ್ತದೆ, ಇನ್‌ಕ್ಲೂಡಿಂಗ್ ಎಲೆಕ್ಟ್ರಿಫಿಕೇಷನ್, ವಿದ್ಯುತ್ತನ್ನು ಅಳವಡಿಸುವುದೂ ಸೇರಿ ಏನು ಖರ್ಚು ಬರುತ್ತದೆ, ಅದರ ಹಂಡ್ರೆಡ್ ಪರ್‌ಸೆಂಟನ್ನೂ ಸರ್ಕಾರವೇ ವಹಿಸಿಕೊಳ್ಳಬೇಕು. ಅದನ್ನು ಮಾಡಬೇಕೆನ್ನುವ ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ.

ಡಾ: ವೈ. ನಾಗಪ್ಪ :– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರು ಯಾವಾಗ ನೀವು ಇದಕ್ಕೆ ಎಲೆಕ್ಟ್ರಿಕ್ ಸರ್ವೀಸ್ ಕೊಡುತ್ತೀರಿ ಎಂದು ಕೇಳಿದರು. ಆಗಲೇ ನಾವು ಕೆಪಿಟಿಸಿಎಲ್ ಎಂ.ಡಿ. ಅವರ ಜೊತೆ ಚರ್ಚೆ ಮಾಡಿದ್ದೇವೆ. ಈ ಎನರ್ಜಿಯನ್ನು ಬೈ ಸಪ್ಟೆಂಬರ್ 2005ನೇ ಇಸವಿಯೊಳಗೆ ನಾವು ಎಲ್ಲರಿಗೂ ಕೊಡುತ್ತೇವೆಂದು ಹೇಳಿದ್ದಾರೆ. ಎರಡನೆಯ ಪ್ರಶ್ನೆ ಕಾಮನ್ ಪ್ರಶ್ನೆ. ಒಂದು ಫಲಾನುಭವಿಗೆ 75 ಸಾವಿರ ಒಂದು ಯೂನಿಟ್ ಕಾಸ್ಟ್ ಇದೆ. 65 ಸಾವಿರ ಸಬ್ಸಿಡಿ. ಇನ್ನು ಹತ್ತು ಸಾವಿರ ರೂ. ಅವರಿಗೆ ಸಾಲವನ್ನು ಕೊಡುತ್ತೇವೆ. ಅದು ನನಗೂ ಅರ್ಥವಾಗುತ್ತದೆ. 75 ಸಾವಿರ ಆಗುವುದಿಲ್ಲ. It is done in the Board resolution ಇದನ್ನು ನಾನು ಪುನಃ ಮೀಟಿಂಗ್ ಕರೆದು ಬಹುಶಃ 90 ಸಾವಿರವೋ, ಒಂದು ಲಕ್ಷಕ್ಕೆ ಹೆಚ್ಚಿಗೆ ಮಾಡುವ ಒಂದು ವ್ಯವಸ್ಥೆಯನ್ನು ಮಾಡುತ್ತೇನೆ. ಈ ಸಂದರ್ಭದಲ್ಲಿ ನಾನು ಇದನ್ನು ಎಲ್ಲಾ ಸದಸ್ಯರಿಗೂ ಹೇಳುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ :– ಅವರು ಹೇಳಿದ್ದು 70–80–90 ಸಾವಿರ ರೂ. ಅಲ್ಲ. ಪೂರ್ಣ ಯೂನಿಟ್ ಕಾಸ್ಟ್ ಎಷ್ಟಾಗುತ್ತದೆ? ಸಂಪೂರ್ಣವಾಗಿ ಸರ್ಕಾರದ ವತಿಯಿಂದ ಭರಿಸಿ ಎಂದು ಅವರು ಕೇಳುತ್ತಿರುವುದು. ಒಂದು ಲಕ್ಷ ಮಾಡಿದರು ಮತ್ತೆ ಕೈಯಿಂದ ತುಂಬಿ ಎನ್ನುತ್ತೀರಿ. ಸಂಪೂರ್ಣ ಯೂನಿಟ್ ಕಾಸ್ಟನ್ನು ಭರಿಸುತ್ತೇವೆಂದು ಹೇಳಿ.

ಡಾ: ವೈ. ನಾಗಪ್ಪ :– ಮಾನ್ಯ ಉಪಾಧ್ಯಕ್ಷರೇ, ಕಾರ್‌ಜೋಳ ಅವರು ಹಿರಿಯ ಸದಸ್ಯರು. ಇವರು ನಮ್ಮ ಮಾಜಿ ಮಂತ್ರಿಗಳು. They know problems of the administration. ಖಂಡಿತವಾಗಿ ನಾವು ಆ ವರ್ಗದ ಜನರಿಗೆ ಒಂದು ಕಾಯಕಲ್ಪವನ್ನು ಕೊಡಬೇಕು. ಅದರ ಬಗ್ಗೆ ನಮ್ಮ ಇಲಾಖೆ ಖಂಡಿತಾ ಚಿಂತನೆಯನ್ನು ಮಾಡುತ್ತಿದೆ. ಚಿಂತನೆ ಮಾಡಿ ಫುಲ್ ಸಬ್ಸಿಡಿಯನ್ನು ಕೊಡುವ ವ್ಯವಸ್ಥೆಯನ್ನು ನಮ್ಮ ಪಾಟೀಲ್ ಸಾಹೇಬರು ಹೇಳಿದ ಹಾಗೆ ಟಾರ್ಗೆಟ್ ಕಡಿಮೆಯಾದರೂ ಪರವಾಗಿಲ್ಲ ಫಲಾನುಭವಿಗಳಿಗೆ ಪುಕ್ಕಟೆಯಾಗಿ ಮಾಡಿ ಕೊಡುವ ವ್ಯವಸ್ಥೆಯನ್ನು ಒಂದು ಸಭೆಯನ್ನು ಕರೆದು ಚರ್ಚೆ ಮಾಡುತ್ತೇನೆ.

ಶ್ರಿ ಗೋವಿಂದ ಎಂ. ಕಾರಜೋಳ :– 2005–06ನೇ ಸಾಲಿನಲ್ಲಿ 8.5 ಕೋಟಿ ರೂಪಾಯಿ ತವು ಗಂಗಾ ಕಲ್ಯಾಣ ಯೋಜನೆಯಲ್ಲಿ ಎಸ್.ಸಿ.ಅವರಿಗೆ ಇಟ್ಟಿದ್ದೀರಿ. ಎಸ್‌ಟಿ ನವರಿಗು 8.5 ಕೋಟಿ ರೂಪಾಯಿ ಇಟ್ಟಿದ್ದೀರಿ. ಎಸ್‌ಸಿ ಜನಾಂಗ ಜಾಸ್ತಿ ಇರುವುದರಿಂದ ಇವತ್ತು ಸುಮಾರು 85 ಲಕ್ಷ ರಾಜ್ಯದಲ್ಲಿ ಎಸ್‌ಸಿ ಜನಾಂಗ ಇದ್ದಾರೆ. ಅದಕ್ಕಾಗಿ ಈ 8.5 ಕೋಟಿ ರೂಪಾಯಿ ಸಾಕಾಗುವುದಿಲ್ಲ. ಒಂದು 20 ಕೋಟಿ ರೂಪಾಯಿಯನ್ನಾದರೂ ತಾವು ಕೊಡಬೇಕಾಗುತ್ತದೆ. ಜನಸಂಖ್ಯೆ ಪ್ರಮಾಣದ ಮೇಲೆ ಕೊಡಬೇಕಾಗುತ್ತದೆ. ಅದಕ್ಕೆ ದಯವಿಟ್ಟು 20 ಕೋಟಿ ರೂಪಾಯಿ ತಾವು ಕೊಡುತ್ತೀರಾ ಹೇಗೆ?

ಡಾ: ವೈ. ನಾಗಪ್ಪ :– ನೀವು ಹೇಳುವುದರಲ್ಲಿ ಸತ್ಯಾಂಶ ಇದೆ. ಅದರ ಮೇಲೆ ಖಂಡಿತ ಪರಿಶೀಲನೆ ಮಾಡುತ್ತೇನೆ, ಆ ವ್ಯವಸ್ಥೆ ಮಾಡುತ್ತೇವೆ.

ಕೊಳ್ಳೇಗಾಲ ಕ್ಷೇತ್ರದಲ್ಲಿ ಮೆಟ್ರಿಕ್ ಹಾಗೂ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ ಹೆಚ್ಚುವರಿ ಪ್ರವೇಶ ನೀಡುವುದು

518 (5911) : **ಶ್ರೀಮತಿ ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ)**: ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರದಲ್ಲಿ ಮೆಟ್ರಿಕ್ ಹಾಗೂ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ ಹೆಚ್ಚಿನ ಪ್ರವೇಶಕ್ಕೆ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅತೀ ಹೆಚ್ಚು ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ / ಹಿಂದುಳಿದ ವರ್ಗಗಳು ಇರುವ ಈ ಕ್ಷೇತ್ರದಲ್ಲಿ ಹೆಚ್ಚುವರಿ ಪ್ರವೇಶ ನೀಡುವ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ;

ಇ) ಹೊಸದಾಗಿ ಹಾಸ್ಟೆಲ್ ತೆರೆಯಲು ಕ್ರಮ ಕೈಗೊಳ್ಳಲಾಗಿದೆಯೆ;

ಈ) ಈ ಕ್ಷೇತ್ರದಲ್ಲಿ ನೂತನವಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ತೆರೆಯಲು ಸರ್ಕಾರ ಕ್ರಮ ಕೈಗೊಂಡಿದೆಯೆ;

ಉ) ಇಲ್ಲವಾದಲ್ಲಿ, ಈ ಸಾಲಿನಲ್ಲಿ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೆ;

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) 2005–06ನೇ ಸಾಲಿನಲ್ಲಿ ಸಂಖ್ಯಾಬಲ ಹೆಚ್ಚಳಕ್ಕಾಗಿ ಪ್ರಸ್ತಾವನೆ ಬಂದಿದ್ದು, ಹೆಚ್ಚುವರಿ ಆಯವ್ಯಯ ಲಭ್ಯತೆ ಆಧರಿಸಿ ಪರಿಶೀಲಿಸಲಾಗುವದು.

ಇ) ಹೊಸ ವಿದ್ಯಾರ್ಥಿ ನಿಲಯಗಳ ಪ್ರಾರಂಭಕ್ಕಾಗಿ ಆಯವ್ಯಯದ ಲಭ್ಯತೆಯನ್ನು ಆಧರಿಸಿ ಪರಿಶೀಲಿಸಲಾಗುವುದು.

ಉತ್ತರ (ಈ) ಮತ್ತು (ಉ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 2005–06ನೇ ಸಾಲಿನಲ್ಲಿ 43 ನೂತನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಸ್ಥಳಗಳ ಆಯ್ಕೆಯನ್ನು ಮಾಡಲಾಗುತ್ತಿದೆ.